**ದಿನಾಂಕಃ 05-03-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.**
**ಪಾಟೀ ಸವಾಲುಃ ಶ್ರೀ ಜಿ ಜಿ ಜಿ ವಕೀಲರಿಂದಃ**

ನಾನು ಹೆಗಡೆಗೆ ಬಂದು ಮನೆ ಕಟ್ಟಿ 15 ವರ್ಷಗಳಾಗಿವೆ. ನಾನು ಖರೀದಿ ಮಾಡಿದ ಸರ್ವೆ ನಂಬರ 202 ಹಿಸ್ಸಾ 2 ಇದು ಮೊದಲು ಚಿದಂಬರ ಭಟ್ಟ ಎನ್ನುವವರ ಹೆಸರಿನಲ್ಲಿ ಇತ್ತು. ನಮ್ಮ ಜಾಗ ಉತ್ತರ ದಕ್ಷಿಣವಾಗಿ ಇದೆ ಎಂದರೆ ಸರಿ. ಅಂದಾಜು ದಕ್ಷಿಣ ದಿಕ್ಕಿಗೆ ಅರ್ಧ ಜಾಗ ಉತ್ತರ ದಿಕ್ಕಿಗೆ ಅರ್ಧ ಜಾಗ ಬರುತ್ತದೆ ಎಂದರೆ ಸರಿ. ನನ್ನ ಜಾಗದ ಮಧ್ಯದಲ್ಲಿ ಪಂಚಾಯತದ ಒಂದು ರಸ್ತೆ ಹಾದು ಹೊಗಿದೆ ಎಂದರೆ ಸರಿ. ಅದನ್ನು ಪಂಚಾಯತದವರು ಡಾಂಬರಿಕರಣ ಮಾಡುವುದು ಮತ್ತು ದೇಖರೇಖಿ ನೋಡಿಕೊಳ್ಳುವುದನ್ನು ನಾನು ಜಾಗ ಖರೀದಿಸುವ ಪೂರ್ವದಿಂದಲೂ ನೋಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ನಾನು ಜಾಗವನ್ನು ಖರೀದಿ ಮಾಡುವ ಪೂರ್ವದಲ್ಲಿಯೇ ಆ ಜಾಗದಲ್ಲಿ ರಸ್ತೆ ಹೋಗುತ್ತದೆ ಎಂಬ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿ. ಆ ರಸ್ತೆಯ ಮೂಲಕವೇ ಹೆಗಡೆಯಿಂದ ಕಲ್ಕೋಡ ಮಜರೆಗೆ ಹೋಗಬೇಕಾಗುತ್ತದೆ ಎಂದರೆ ಸರಿ. ನನ್ನ ಜಾಗದ ದಕ್ಷಿಣದ ಭಾಗ ಸುಮಾರು 20 ಪೂಟ ಎತ್ತರ ಇರುವ ಗುಡ್ಡದ ಪ್ರದೇಶ ಎಂದರೆ ನಾನು ಜಾಗವನ್ನು ಖರೀದಿಸಿದಾಗ ಗುಡ್ಡ ಇತ್ತು ಈಗ ಸಮತಟ್ಟು ಮಾಡಿಸಿರುತ್ತೇನೆ. ಉತ್ತರದ ಭಾಗ ಮೊದಲು ಗದ್ದೆಯಾಗಿದ್ದು ಅದನ್ನು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ಹಳೆಯ ಮನೆ ನನ್ನ ಜಾಗದ ದಕ್ಷಿಣ ದಿಕ್ಕಿನ ಎತ್ತರದ ಭಾಗದಲ್ಲಿ ಇತ್ತು ಎಂದರೆ ಸರಿ. ನನ್ನ ಜಾಗದ ಪೂರ್ವಕ್ಕೆ ಪಶ್ಚಿಮಾಭಿಮುಖವಾಗಿ ಒಂದು ರಸ್ತೆಯನ್ನು ನಾನು ಬಿಟ್ಟುಕೊಂಡಿದ್ದೇನೆ ಎಂದರೆ ನಾನು ಜಾಗ ಖರೀದಿಸಿದ ನಂತರ ಅದನ್ನು ಬಿನ್‌ಶೇತ್ಕಿ ಮಾಡಿಸುವ ಉದ್ದೇಶಕ್ಕಾಗಿ ಬಿಟ್ಟುಕೊಂಡಿರುತ್ತೇನೆ. ಮೊದಲಿನಿಂದಲೂ ನಮ್ಮ ಮೇಲಿನ ಜಾಗದಿಂದ ನೀರು ಹರಿದು ರಸ್ತೆಗೆ ಬಂದು ಅಲ್ಲಿಂದ ಕೆಳಗಿನ ಗದ್ದೆಗೆ ಹೋಗುತ್ತಿತ್ತು ಎಂದರೆ ಸರಿ.

2. ನನ್ನ ಜಾಗದ ಉತ್ತರ ಭಾಗದಲ್ಲಿ ಮಣ್ಣನ್ನು ತುಂಬಿ ಈಗ ನಾನು ಮತ್ತೊಂದು ಮನೆಯನ್ನು ಕಟ್ಟಿದ್ದೇನೆ ಎಂದರೆ ಸರಿ. ಆ ಮನೆಯನ್ನು ಕಟ್ಟಿದ ನಂತರ ಮೂಲದಾವೆಯಲ್ಲಿ ಬರೆದಿರುವ ವ್ಯಾಜ್ಯಗಳು ಶುರುವಾಯಿತು ಎಂದರೆ ನಾನು ಮನೆ ಕಟ್ಟಿದ ಮೇಲೆ ನನ್ನ ಜಾಗದಲ್ಲಿದ್ದ ಮೋರಿಯನ್ನು 1ನೇ ಪ್ರತಿವಾದಿಯು ಅಡ್ಡಗಟ್ಟಿದ್ದರಿಂದ ಶುರುವಾಗಿದೆ. ನನ್ನ ಜಾಗದ ಪಕ್ಕದಲ್ಲಿಯೇ ಒಂದು

ಟ್ರಾನ್ಸ್‌ಫಾರ್ಮರ್ ಇದೆ ಎಂದರೆ ಸರಿ. ಮಳೆಗಾಲದಲ್ಲಿ ಅಲ್ಲಿ ನೀರು ಹೆಚ್ಚಾಗಿ ನಿಂತು ಜನರಿಗೆ ವಿದ್ಯುತ್ ಶಾಕ್ ಹೊಡೆದು ಆ ಬಗ್ಗೆ ದಿನಪತ್ರಿಕೆಯಲ್ಲೆಲ್ಲಾ ಬಂದಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು



1ನೇ ಪ್ರತಿವಾದಿಯು ಮೋರಿಯ ನೀರನ್ನು ಕಟ್ಟಿದ್ದರಿಂದ ಆ ರೀತಿಯಾಗಿದೆ ಎಂದು ನುಡಿದಿರುತ್ತಾರೆ. ನಾನು ಮನೆ ಕಟ್ಟಿದ ನಂತರ 1ನೇ ಪ್ರತಿವಾದಿಯ ಜಾಗದಿಂದ ನೀರು ಹರಿದುಹೋಗಲು ಶುರುವಾಯಿತು ಎಂದರೆ ಸರಿಯಲ್ಲಾ ಅಲ್ಲಿ 1ನೇ ಪ್ರತಿವಾದಿಯು ಮೋರಿ ಕಟ್ಟಿರುತ್ತಾನೆ.

ಮುಂದುವರೆದ ಪಾಟೀ ಸವಾಲಿಗೆ ಶ್ರೀ ಜಿ ಜಿ ಜಿ ವಕೀಲರು ಸಮಯ ಕೇಳಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆ. ಸಿವಿಲ್ ಜಡ್ಜ್ ಕುಮಟಾ.